ಉಪಾಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರ ಇದೆಯೇ ಎಂದು. ಪ್ರಶ್ನೆಯನ್ನೇ ಕೇಳಿದುದ್ದು.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಮಾನ್ಯ ಸದಸ್ಯರ ಮನಸ್ಸಿನಲ್ಲಿರತಕ್ಕ ಆತಂಕ ನನಗೆ ಅರ್ಥವಾಗಿದೆ. ಈಗಾಗಲೇ ಇಲಾಖೆ ಅನೇಕರ ಮೇಲೆ ಪೋಲೀಸ್‌ನವರಿಗೆ ದೂರು ಕೊಡುವುದರ ಜೊತೆಗೆ ಕೇಸ್ ಕೂಡ ದಾಖಲು ಮಾಡಲಾಗಿದೆ. ಇದರಲ್ಲಿ ಇಲಾಖೆಯ ಅಧಿಕಾರಿಗಳು ಯಾರಾದರು ತಪ್ಪಿತಸ್ಥರೆಂದು ಕಂಡು ಬಂದರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಒಂದು ಎಕರೆ, ಅರ್ಧ ಎಕರೆ ಅರಣ್ಯವನ್ನು ನಾಶ ಮಾಡಬೇಕಾದರೆ ಒಂದು ಗಂಟೆ-೨ ಗಂಟೆಯಾದರೂ ಬೇಕಾಗುತ್ತದೆ. ಆದರೆ ೪೭ ಎಕರೆಯಲ್ಲಿದ್ದಂತಹ ಅರಣ್ಯವನ್ನು ಕಡಿಯಬೇಕಾದರೆ. ಇಲಾಖೆಯವರು ಏನಾದರೂ ಮಲಗಿದ್ದರಾ ? ಅಥವಾ ನಿದ್ರೆ ಮಾಡುತ್ತಿದ್ದರಾ ? ಇದನ್ನು ನೋಡಿದ ಮೇಲೆ ಇಲಾಖೆ ನಿದ್ರೆ ಮಾಡುತ್ತಿದೆ ಎಂಬುದನ್ನು ನಾವೂ ಒಪ್ಪಿಕೊಳ್ಳಬೇಕಾಗುತ್ತದೆ. ಮಂತ್ರಿಗಳೂ ಒಪ್ಪಿಕೊಳ್ಳಬೇಕಾಗುತ್ತದೆ. ತಪ್ಪು ಮುಖ್ಯಾಂತರ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ೨-೩ ವರ್ಷಗಳಿಂದ ಬಡವರು ಅಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಸಾವಿರ ಗಟ್ಟಲೆ ಎಕರೆ ಅರಣ್ಯ ಪ್ರದೇಶವನ್ನು ಅತಿಕ್ರಮ ಮಾಡಿರುವಂತ ಶ್ರೀ ಮಂತರನ್ನು ಅರಣ್ಯದಿಂದ ಎಬ್ಬಿಸುವುದಕ್ಕೆ ಇವರಿಗೆ ಆಗುವುದಿಲ್ಲ. ಯಾರಾದರು ಬಡವರು ಸಿಕ್ಕರೆ ಅವರ ಜಮೀನಿನಲ್ಲಿ ಬುಲ್ಡೋಜರ್ ಅನ್ನು ತೆಗೆದುಕೊಂಡು ಬಂದು ನಾಶ ಮಾಡುತ್ತಾರೆ. ೫ ವರ್ಷ ಬೆಳೆದಂತಹ ಕಾಡನ್ನು ಕಡಿಯಬೇಕಾದರೆ ನಿಮ್ಮ ಇಲಾಖೆ ಏನು ಮಾಡುತ್ತಿತ್ತು ? ಅಂತಹ ಅಧಿಕಾರಿಗಳ ಮೇಲೆ ತೀವ್ರ ರೀತಿಯ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಿ. ಎಸ್. ಬಾಗಲ್‌ಕೋಟ್.—ಆ ಬಗ್ಗೆ ತನಿಖೆ ಮಾಡಿ ಆದಷ್ಟು ತೀವ್ರ ರೀತಿಯ ಕ್ರಮ ತೆಗೆದುಕೊಳ್ಳುತ್ತೇನೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವುದು

೮೭೨(೨೦೪೩) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಪಶು, ಪಶು ಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಾನ್ಯ ಪಶುಸಂಗೋಪನಾ ಸಚಿವರು ಘೋಷಿಸಿರುವಂತೆ ೭೫೦೦ ದನಕರುಗಳಿಗೆ ಒಂದರಂತೆ ಪಶುವೈದ್ಯ ಶಾಲೆಯನ್ನು ತೆರೆಯುವ ಯೋಜನೆ ಕಾರ್ಯರೂಪಕ್ಕೆ ತರಲಾಗಿದೆಯೆ?

ಆ) ರಾಜ್ಯದಲ್ಲಿ ಎಷ್ಟು ಪಶುವೈದ್ಯ ಶಾಲೆಗಳನ್ನು ತೆರೆಯಲಾಗಿದೆ? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಇ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಪಶುವೈದ್ಯ ಶಾಲೆಗಳನ್ನು ತೆರೆಯಲಾಗಿದೆ?

ಈ) ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ, ಮಾರಿಹಳ್ಳಿ, ಹುಲಿಕಟ್ಟೆ, ಬಾಗಳಿ, ಗೌರಿಹಳ್ಳಿ, ಜಂಬುಲಿಂಗನಹಳ್ಳಿ ಗ್ರಾಮಗಳಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಈ ವರ್ಷ ತೆರೆಯಲಾಗುವುದೆ?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ಪಶು, ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ೭,೫೦೦ ದನಗಳ ಘಟಕಗಳಿಗೆ ಒಂದು ಪಶುವೈದ್ಯ ಶಾಲೆಯನ್ನು ತೆರೆಯಬೇಕೆಂಬುದು ಸರ್ಕಾರದ ನೀತಿ. ಆದರೆ ಇದನ್ನು ಕಾರ್ಯರೂಪಕ್ಕೆ ತರಲಾಗಿಲ್ಲ.

ಆ) ೧೨೩೬ (ಜಿಲ್ಲಾವಾರು ಮಾಹಿತಿಯ ಪಟ್ಟಿಯನ್ನು ಲಗತ್ತಿಸಿದೆ)

೩) ಇಲ್ಲ.

೪) ಈ ಬಗ್ಗೆ ಬಳ್ಳಾರಿ ಜಿಲ್ಲಾ ಪರಿಷತ್‌ನವರೇ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ.

ರಾಜ್ಯದಲ್ಲಿ ಇದುವರೆವಿಗೂ ತೆರೆಯಲಾಗಿರುವ ಪಶುವೈದ್ಯ ಶಾಲೆಗಳ ಜಿಲ್ಲಾವಾರುಗಳ ವಿವರ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ಪಶು ಆಸ್ಪತ್ರೆ	ಪಶುವೈದ್ಯ ಶಾಲೆಗಳು	ಗ್ರಾಮಾಂತರ ಪಶುವೈದ್ಯ ಶಾಲೆಗಳು	ಪಶು ಚಿಕಿತ್ಸಾ ಕೇಂದ್ರಗಳು	ಒಟ್ಟು
೧	೨	೩	೪	೫	೬	೭
೧	ಬೆಂಗಳೂರು ನಗರ	೨	೨೨	೧೦	—	೩೪
೨	ಬೆಂಗಳೂರು ಗ್ರಾಮಾಂತರ	—	೨೪	೩೧	—	೫೫
೩	ಚಿತ್ರದುರ್ಗ	೧	೩೧	೪೭	—	೭೯
೪	ಕೋಲಾರ	೨	೨೯	೩೪	—	೬೫
೫	ಶಿವಮೊಗ್ಗ	೨	೨೮	೫೦	—	೮೦
೬	ತುಮಕೂರು	೧	೩೬	೫೨	—	೮೯
೭	ಮೈಸೂರು	೨	೩೨	೫೬	—	೯೦
೮	ಮಂಡ್ಯ	೧	೨೮	೧೭	—	೪೬
೯	ಹಾಸನ	೨	೨೬	೩೮	೧	೬೭
೧೦	ಚಿಕ್ಕಮಗಳೂರು	೧	೨೩	೩೧	—	೫೫
೧೧	ದಕ್ಷಿಣ ಕನ್ನಡ	೨	೨೩	೩೫	೨	೬೨
೧೨	ಕೊಡಗು	೧	೧೨	೧೯	—	೩೨
೧೩	ಗುಲ್ಬರ್ಗ	೧	೨೨	೪೨	—	೬೫
೧೪	ಬೆಳಗಾವಿ	೧	೨೮	೩೭	೧೪	೮೦
೧೫	ಬಿಜಾಪುರ	೧	೨೭	೨೬	೧೭	೭೧
೧೬	ಉತ್ತರ ಕನ್ನಡ	೩	೧೭	೨೬	೭	೫೩
೧೭	ಧಾರವಾಡ	೪	೩೯	೪೩	೧೪	೧೦೦
೧೮	ಬಳ್ಳಾರಿ	೧	೨೦	೨೩	—	೪೪
೧೯	ಬೀದರ್	೧	೧೩	೧೪	—	೨೮
೨೦	ರಾಯಚೂರು	೪	೧೫	೨೨	—	೪೧
	ಒಟ್ಟು	೩೩	೪೯೫	೬೫೩	೫೫	೧೨೩೬

ಶ್ರೀ ಬಿ. ಹೆಚ್. ಯಂಕಾನಾಯಕ್.—ನಮ್ಮ ಭಾಗದಲ್ಲಿ ೧೯೮೬-೮೭ ಮತ್ತು ೧೯೮೭-೮೮ನೇ ಸಾಲುಗಳಲ್ಲಿ ಒಂದೇ ಒಂದು ಪಶುವೈದ್ಯ ಶಾಲೆಯನ್ನು ತೆರೆದಿಲ್ಲ. ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಬೇಕೆಂದು ಮನವಿಗಳನ್ನು ಜಿಲ್ಲಾಪರಿಷತ್ತಿಗೆ ಸಲ್ಲಿಸಲಾಗಿದೆ. ಆದರೆ ಅವರು ಸರ್ಕಾರದ ಮನ್ನು ತೋರಿಸುತ್ತಾರೆ. ಇಲ್ಲಿ ಸರ್ಕಾರವನ್ನು ಕೇಳಿದರೆ ಜಿಲ್ಲಾಪರಿಷತ್ತಿನ ಕಡೆ ಕೈತೋರಿಸುತ್ತಾರೆ. ಈ ರೀತಿಯಾದರೆ ಪಶುವೈದ್ಯ ಆಸ್ಪತ್ರೆಗಳು ಆಗುವುದು ಯಾವಾಗ? ಆದರಿಂದ ದನ-ಕರುಗಳಿಗೆ

ಗ?

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಈಗ ಜಿಲ್ಲಾಪರಿಷತ್ತು ಆದ ಮೇಲೆ, ಜಿಲ್ಲಾಪರಿಷತ್ತಿನ ವರೇ ಡಿಸ್ಟ್ರಿಕ್ಟ್ ಪ್ಲಾನ್ ಮಾಡುವಾಗ ಈ ಯೋಜನೆಯ ಕೆಳಗಡೆ ಎಷ್ಟು ಆಸ್ಪತ್ರೆಗಳ ಅಗತ್ಯ ಇದೆ. ಯಾವ್ಯಾವ ಊರಿನಲ್ಲಿ ಅವುಗಳನ್ನು ತೆರೆಯಬೇಕೆಂಬುದನ್ನು ಅದರಲ್ಲಿ ತೋರಿಸಿ ಅದಕ್ಕೆ ಬೇಕಾಗಿರ ತಕ್ಕಂತಹ ಹಣವನ್ನು ಪ್ರೊವೈಡ್ ಮಾಡಬೇಕು. ಈಗ ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯತಕ್ಕ ಪೂರ್ಣ ಅಧಿಕಾರವನ್ನು ಜಿಲ್ಲಾಪರಿಷತ್ತಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಜಿಲ್ಲಾಪರಿಷತ್ತಿನವರು ಇದನ್ನು ಮಾಡಬೇಕಾದರೆ ಸರ್ಕಾರ ದಿಂದ ಸಾಲವನ್ನು ಬೇಡುತ್ತಾರೆ. ಇಲ್ಲದಿದ್ದರೆ ಅವರಲ್ಲಿ ಹಣ ಎಲ್ಲಿಂದ ಬರಬೇಕು. ಅವರಿಗೆ ಬೇಕಾದ ಹಣವನ್ನು ನೀವೇ ಕೊಡುವಂತಹದ್ದು. ಎಲ್ಲ ಹಳ್ಳಿಗಳಲ್ಲಿರತಕ್ಕ ಜಾನುವಾರುಗಳ ಸಂಖ್ಯೆ ಯನ್ನು ಪರಿಗಣನೆಗೆ ತೆಗೆದುಕೊಂಡು ಅಗತ್ಯವಾಗಿ ಕೆಲವಾರು ಕಡೆಯಾದರೂ ಪಶುವೈದ್ಯ ಆಸ್ಪತ್ರೆ ಗಳನ್ನು ತೆರೆಯಬೇಕೆಂದು ಪುನವಿ ಪತ್ರ ಸಲ್ಲಿಸಲಾಗಿದೆ. ಆದ್ದರಿಂದ ಅಲ್ಲಿಗೆ ಪಶುವೈದ್ಯ ಆಸ್ಪತ್ರೆ ಯನ್ನು ಮಂಜೂರು ಮಾಡಬೇಕು. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೊಸದಾಗಿ ಎಷ್ಟು ಆಸ್ಪತ್ರೆಗಳನ್ನು ತೆಗೆದಿದ್ದೀರಿ ಎಂಬುದನ್ನು ಹೇಳಬೇಕು. ಜಿಲ್ಲಾಪರಿಷತ್ತು ಅಸ್ತಿತ್ವಕ್ಕೆ ಬಂದು ೨ ವರ್ಷಗಳಾಗಿವೆ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಈಗ ಇರುವ ಸರ್ಕಾರದ ನೀತಿಯೆಂದರೆ ಏನಾದರೂ ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು ತೆಗೆಯಬೇಕಾಗಿದ್ದರೆ, ಸಂಬಂಧಪಟ್ಟ ಜಿಲ್ಲಾಪರಿಷತ್ತಿನವರೇ ಆ ಕೆಲಸ ಮಾಡಬೇಕು. ಇಲ್ಲಿಂದ ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದಿದ್ದು ಇತ್ತೀಚೆಗೆ; ಅದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರದಿಂದಲೇ ಹೊಸದಾಗಿ ತೆರೆಯುವಂತಹ ತೀರ್ಮಾನ ಕೈಗೊಳ್ಳಬೇಕು.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಸರ್ಕಾರದಿಂದ ಹೊಸದಾಗಿ ಪಶುವೈದ್ಯ ಆಸ್ಪತ್ರೆ ಗಳನ್ನು ತೆರೆಯುವುದಕ್ಕಾಗುವುದಿಲ್ಲ. ಅದು ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟದ್ದು.

ಶ್ರೀ ಎಂ. ಎಸ್. ಪಾಟೀಲ್.—ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ಜಿಲ್ಲಾಪರಿಷತ್ತಿನವರನ್ನು ಕೇಳಿದರೆ ಅವರು ಸರ್ಕಾರದ ಕಡೆ ಕೈ ತೋರಿಸುತ್ತಾರೆ. ಇಲ್ಲಿ ಬಂದು ಸರ್ಕಾರದವರನ್ನು ಕೇಳಿದರೆ ಅವರು ಜಿಲ್ಲಾಪರಿಷತ್ತಿನ ಕಡೆ ಕೈ ತೋರಿಸುತ್ತಾರೆ. ಜಿಲ್ಲಾಪರಿಷತ್ತಿನಲ್ಲಿ ಹಣವೇ ಇಲ್ಲ. ಇದರಿಂದಾಗಿ ಜಾನುವಾರುಗಳ ಪರಿಸ್ಥಿತಿ ಏನಾಗಬೇಕು? ದನದ ಮಂತ್ರಿಗಳು ಈ ರೀತಿ ಉತ್ತರ ಕೊಟ್ಟರೆ ಹೇಗೆ? ನಿಮ್ಮ ಇಲಾಖೆಯು ಬೇಡಿಕೆ ಬಂದಾಗಲೇ ಇದರ ಬಗ್ಗೆ ವಿಚಾರ ಮಾಡಬೇಕಾಗಿತ್ತು. ರೈತರ ಬಗ್ಗೆ ನಿಮಗೆ ಆಲೋಚನೆಯೇ ಇಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ.

ಶ್ರೀ ಮಹಮದ್ ಮೊಯಿನುದ್ದೀನ್.—ನಾನು ಈಗಾಗಲೇ ಹೇಳಿದಹಾಗೆ ಜಿಲ್ಲಾಪರಿಷತ್ತಿನಲ್ಲಿ ಸಂಬಂಧಪಟ್ಟ ಶಾಸಕರು ಇರುತ್ತಾರೆ. ಎಲ್ಲಿಗೆ ಅಗತ್ಯ ಇದೆಯೋ ಒತ್ತಡ ಇದೆಯೋ ಅಲ್ಲಿಗೆ ಜಿಲ್ಲಾಪರಿಷತ್ತಿನ ಮೂಲಕ ಪ್ರೊವೈಡ್ ಮಾಡಿಕೊಳ್ಳಬಹುದು.

ಶ್ರೀ ಬಿ. ಲಕ್ಕಪ್ಪ.—ಇವತ್ತು ಜಿಲ್ಲಾಪರಿಷತ್ತಿಗೆ ಇದಕ್ಕಾಗಿ ಪ್ರತ್ಯೇಕ ಹಣ ಇಲ್ಲ. ಸರ್ಕಾರ ಹಣ ಕೊಟ್ಟರೆ ಅಲ್ಲಿ ಮಾಡುತ್ತಾರೆ. ಅವರಲ್ಲಿ ಹಣ ಇಲ್ಲದಿದ್ದರೆ ಏನು ಮಾಡುತ್ತಾರೆ.

ಶ್ರೀ ಎಂ. ಎಸ್. ಪಾಟೀಲ್.—ನನ್ನ ಕೂಸೂ ಅಲ್ಲ, ಅವರ ಕೂಸೂ ಅಲ್ಲ ಎನ್ನುವ ವಿಶ್ವಾಮಿತ್ರನ ಪರಿಸ್ಥಿತಿ ಇವತ್ತು ಈ ಸರ್ಕಾರದಲ್ಲಿ ಸೃಷ್ಟಿಯಾಗಿದೆ. ಜಿಲ್ಲಾಪರಿಷತ್ತಿನಲ್ಲಿ ಏನಾದರೂ ಕೇಳಿದರೆ ಅವರು ಸರ್ಕಾರದ ಕಡೆ ತೋರಿಸುತ್ತಾರೆ. ಇಲ್ಲಿ ಆ ಬಗ್ಗೆ ಕೇಳಿದರೆ ಜಿಲ್ಲಾಪರಿಷತ್ತಿನ ಕಡೆ ತೋರಿಸುತ್ತಾರೆ.

ಶ್ರೀ ಬಿ. ಸ್ವಾಮಿರಾವ್.—ಶಾಸನಸಭಾ ಕಲಾಪವನ್ನೇ ಜಿಲ್ಲಾಪರಿಷತ್ತುಗಳಿಗೆ ಮಹಿಸಿದರೆ ಚೆನ್ನಾಗಿರುತ್ತಿತ್ತಲ್ಲವೇ?

ಉತ್ತರ ಕನ್ನಡ ಜಿಲ್ಲೆಯಲ್ಲಿ "ಆಪ್ಪಿಕೋ" ಚಳುವಳಿಗಾರರು

೮೭೩(೨೭೧೫) ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—